Regd. No. M 1299 SATYAVADI Fonnded 1917

ಸತ್ಯವಾದಿ
SATYAVADI

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸರಿಪುಟ 30 ಸಂಚಿಕೆ 3 | ಮಂಗಳವಾರ 3–9–46 | ಬಿಡಿ ಪ್ರತಿ 3 ಪೈ

ಹೈದರಾಬಾದು ಸಂಸ್ಥಾನಗಳು

ಜನ ಸಂಖ್ಯೆಯಲ್ಲಿ ಹಿಂದೂಗಳು 130 ಲಕ್ಷ ಮುಹಮ್ಮದೀಯರು 30 ಲಕ್ಷ. ಅಂದರೆ ಪ್ರತಿ 4 ॥ ಹಿಂದೂಗಳಿಗೆ ಒಬ್ಬ ಮುಹಮ್ಮದೀಯನಿದ್ದಾನೆ. ಹಾಗಿದ್ದರೂ ಈ ಎರಡು ಪಂಗಡಗಳವರಿಗೂ ಸಮಾನ ಪ್ರಾತಿನಿಧ್ಯತೆಯನ್ನು ಕೊಟ್ಟಿರುವರು. ಪ್ರಾತಿನಿಧ್ಯತೆಯ ವಿಷಯದಲ್ಲಿ ಸಮ್ಮಾನತೆಯನ್ನು ಅಂಗೀಕರಿಸಿರುವಾಗ ಕಂದಾಯಗಳ ವಿಷಯದಲ್ಲಿಯೂ ಆ ಸಮಾನತ್ವವೇ ಇರಬೇಕಾಗಿಲ್ಲವೆ? 30 ಲಕ್ಷ ಮಂದಿ ಮುಸ್ಲಿಂರಿಂದ ಎಷ್ಟು ಕಂದಾಯವನ್ನು ವಸೂಲು ಮಾಡುತ್ತಾರೋ 130 ಲಕ್ಷ ಮಂದಿ ಹಿಂದೂಗಳಿಂದ ಅಷ್ಟೇ ಕಂದಾಯವನ್ನು ವಸೂಲು ಮಾಡಬೇಕಾದುದು ನ್ಯಾಯವಾಗಿರುತ್ತದಲ್ಲವೆ?

ಹೊಯ್ಸಳ ಕರ್ನಾಟಕ ಸಂಘ

ಮೈಸೂರು ಸಿಟಿ ಮಾನಂದವಾಡಿ ರಸ್ತೆಯಲ್ಲಿ 'ಕೃಷ್ಣವೇಣಿ' ನಲ್ಲಿರುವ ಸಂಘದ ನಿವೇತನದಲ್ಲಿ ವಿದ್ಯಾರ್ಥಿ ನಿಲಯದ ಶಂಕುಸ್ಥಾಪನೆಯು ಮುನಿಸಿಪಲ್ ಪ್ರೆಸಿಡೆಂಟರಾದ ಶ್ರೀಮಾನ್ ಆರ್. ರಾಮಚಂದ್ರರಾವ್ ಬಾಂಭೋರೆ, ಬಿ. ಎ, ಯವರ ಅಮೃತ ಹಸ್ತದಿಂದ ತಾ॥ 5–9.46 ನೇ ಗುರುವಾರ ಸಂಜೆ 5–30 ಗಂಟೆಗೆ ಸರಿಯಾಗಿ ನೆರವೇರಿಸಲ್ಪಡುವುದೆಂದು ಸಂಘದ ಅಧ್ಯಕ್ಷರಾದ ಶ್ರೀಮಾನ್ ಜಿ. ಕೃಷ್ಣಸ್ವಾಮಿಯವರು ತಿಳಿಸಿರುತ್ತಾರೆ.

———

ಬಟೇವಿಯಾ ಆ. 31 — ಕ್ಯಾ॥ ನಾಕಾಮುರ ಎಂಬ ಜಪಾನ್ ಅಧಿಕಾರಿಯು ಪತ್ನಿ ಕಾರ್ಲಾ ಉಲ್ಫ್ಸ್ ಎಂಬುವಳು 'ಒಂಭತ್ತು ವಿಲಿಖುಕ್ ಸ್ಪೆರ್ಲಿಂಗ್' ದರೋಡೆ ಮೊಕದ್ದಮೆ' ಯಲ್ಲಿ ಭಾಗವಹಿಸಿದ್ದಳೆಂದು 8 ತಿಂಗಳು ಕಠಿಣ ಸಜಾ ವಿಧಿಸಲಾಗಿದೆ.

ಪೋರ್ಟ್‌ಪೋಲಿಯೊ ಬದಲಾವಣೆ

ಬೆಂಗಳೂರು ಸೆ. 2 — ದಿವಾನರು ಇನ್ನು ಮುಂದೆ ತಮ್ಮ ಇಲಾಖೆಗಳೊಂದಿಗೆ ಕೈಗಾರಿಕೆ ವಾಣಿಜ್ಯ ಮತ್ತು ಹಣಕಾಸಿನ ಇಲಾಖೆಗಳನ್ನೂ ನೋಡಿಕೊಳ್ಳುವರು.

ಶ್ರೀ ಎಲ್. ಸಿದ್ದಪ್ಪನವರಿಗೆ ಇನ್ನು ಮುಂದೆ 'ಮಿನಿಸ್ಟರ್ ಫಾರ್ ಪಬ್ಲಿಕ್ ವರ್ಕ್ಸ್ ಮತ್ತು ಅಗ್ರಿಕಲ್ಚರ್' ಎಂಬುದಾಗಿ ಹೆಸರು.

ರಾಜಸೇವಾ ಪ್ರಸಕ್ತ ಶ್ರೀ ಎಂ. ಶೇಷಾದ್ರಿಯವರಿಗೆ 'ಹೋಂ ಮಿನಿಸ್ಟರ್' ಎಂಬುದಾಗಿ ಹೊಸ ಹೆಸರು ಬಂದಿದೆ. ಪೋಲಿಸ್, ಎಕ್ಸೈಜ್ ಇಲಾಖೆಗಳೂ ಸೇರಿವೆ.

ಶ್ರೀ ಅಪ್ಪಾಜಿಗೌಡರಿಗೆ 'ಮಿನಿಸ್ಟರ್ ಫಾರ್ ರೆವಿನ್ಯೂ ಅಂಡ್ ಕಮ್ಯೂನಿಕೇಷನ್ಸ್' ಎಂಬುದಾಗಿ ಹೆಸರು

ದಿವಾನ್ ಸರ್ ಮೊದಲಿಯಾರರು ನ್ಯೂಯಾರ್ಕ್‌ಗೆ ಹೋಗುವುದಿಲ್ಲ

ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರು ಸಂಯುಕ್ತ ಮಹಾಸಭೆಯ ಆರ್ಥಿಕ ಮತ್ತು ಸಾಮಾಜಿಕ ಅಂಗ ಸಮಿತಿಯ ಅಧ್ಯಕ್ಷತೆಯನ್ನು ವಹಿಸಲು ನ್ಯೂಯಾರ್ಕ್‌ಗೆ ಪ್ರಯಾಣ ಬೆಳೆಸಲು ಸಾಧ್ಯವಾಗದೇ ಇರುವುದರಿಂದ ಸರ್ ಗಿರಿಜಾ ಶಂಕರ ಬಾಜಪಾಯಿಯವರು ಆ ಕೆಲಸವನ್ನು ನೋಡುವರು.

———

ನೇರಾದ ಕಾರ್ಯಾಚರಣೆಯು ಒಂದು ಅಂಗವಾಗಿ ರೈಲ್ವೇಗಳಲ್ಲಿ ಟಿಕೇಟು ಕೊಡದೆ ಪ್ರಯಾಣ ಮಾಡುವ ಕಾರ್ಯಕ್ರಮವೂ ಸೇರಬೇಕೆಂದು ಲಾಹೋರ್ 'ಪಾಕೀಸ್ತಾನ' ಪತ್ರಿಕೆಯ ಸಂಪಾದಕರು ಮಹಮ್ಮದಾಲಿ ಜಿನ್ನರಿಗೆ ಸೂಚಿಸಿದ್ದಾರಂತೆ.

ಬ್ರೇಜಿಲ್‌ದಿಂದ ಹಲವು ಟ್ರಕ್‌ಗಳಷ್ಟು ಯುರೇನಿಯಮ್ ಲೋಹವು ಕಾಣೆಯಾದುದರಿಂದ ಅಧಿಕಾರಸ್ಥರು ದಿಗಿಲುಗೊಂಡಿದ್ದಾರೆ.

ಬೊಂಬಾಯಿನಲ್ಲಿ ಗಲಭೆ
60 ಜನ ಸತ್ತರು 200 ಜನ ಗಾಯ

ಬೊಂಬಾಯಿನಲ್ಲಿ ಗಲಭೆ

ಬೊಂಬಾಯಿ ಸೆ. 2 — ಡೆಲ್ಲಿಯಲ್ಲಿ ಇಂದು ಸ್ಥಾಪನೆಯಾದ ತಾತ್ಕಾಲಿಕ ಸರಕಾರದ ಬಗ್ಗೆ ಕಾಂಗ್ರೆಸ್ ಸಹಕಾರಿಗಳು ಕಾಂಗ್ರೆಸ್ ಧ್ವಜ ಹಾರಿಸಲು ಲೀಗು ಪರದವರು ಕಪ್ಪು ಧ್ವಜ ಹಾರಿಸಲು ಮಾಡುತ್ತಿದ್ದ ಏರ್ಪಾಡು ಸಂದರ್ಭದಲ್ಲಿ ವೈಷಮ್ಯ ಹುಟ್ಟಿ ಕೋಮುವಾರು ಗಲಭೆ ನಡೆಯಿತು. ಜೂರಿ ಮುಂತಾದುವುಗಳ ತಿವಿತದಿಂದ 60 ಕ್ಕೆ ಕಡಿಮೆ ಇಲ್ಲದೆ ಸತ್ತಿರುವರು. 200 ಕ್ಕೆ ಮೇಲ್ಪಟ್ಟು ಗಾಯಗೊಂಡಿರುವರು. ಕೂಡಲೇ ಪೋಲೀಸರು ಬಂದು ಹತೋಟಿಗೆ ತಂದರು. 3 ಸಾರಿ ಗುಂಡು ಹಾರಿಸಲಾಯಿತು. ಮುಖ್ಯ ಸ್ಥಳಗಳಲ್ಲಿ ಮಿಲಿಟರಿ ಪಿಕೆಟ್ ಇಡಲಾಗಿದೆ. 7 ದಿನ ಕಾಲ ಸಂಜೆ 7 ರಿಂದ ಬೆಳಿಗೆ 6-30 ರವರೆಗೆ ಕರ್ಫ್ಯೂ ಆಜ್ಞೆ ಜಾರಿಯಾಗಿದೆ. ಸೆಕ್ಷ್ 144 ಜಾರಿ ಮಾಡಲ್ಪಟ್ಟ 5 ಜನರಿಗೆ ಹೆಚ್ಚು ಸೇರದಂತೆಯೂ ಆಯುಧ ಹಿಡಿಯದಂತೆಯು ಪ್ರತಿಬಂಧಿಸಲಾಗಿದೆ. ಗಲಾಟೆ ಸ್ಥಳಗಳ ಮೇಲೆಲ್ಲಾ ವಿಮಾನ ಹಾರಾಡುತ್ತಿದೆ. ಕಾಂಗ್ರೆಸ್, ಲೀಗು, ಮತ್ತು ಕಮ್ಯೂನಿಸ್ಟರು ಶಾಂತಿ ಸ್ಥಾಪಿಸುವ ಬಗ್ಗೆ ಜನರಲ್ಲಿ ಮನವಿ ಮಾಡಿಕೊಂಡಿದ್ದಾರೆ.

ಬೆಟ್ಟದಿಂದ ಬಸ್ಸು ಉರುಳಿತು

ಮೈಸೂರು ಸೆ. 3 — ಶ್ರೀ ಚಾಮುಂಡೇಶ್ವರಿ ಬೆಟ್ಟದಿಂದ ಕಳೆದ ರಾತ್ರಿ ಒಂದು ಬಸ್ಸು ಇಳಿಯುತ್ತಿದ್ದಿತೆಂದೂ ರಸ್ತೆಯನ್ನು ಬಳಸುವಾಗ ಉರುಳಿ ಬಿದ್ದಿತೆಂದೂ ಸಾರಥಿಗೆ ಬಹಳವಾಗಿ ಏಟು ಬಿದ್ದಿದೆಯೆಂದೂ ತಿಳಿಯ ಬಂದಿದೆ.

ದಸರಾ ರಜಾ

ಮೈಸೂರು ಸೆ. 3 — ಇದೇ ತಾ॥ 10 ರಿಂದ ಮೈಸೂರು ಇಂಟರ್ ಮಿಡಿಯೇಟ್ ಕಾಲೇಜು ದಸರಾ ಮಹೋತ್ಸವದ ಪ್ರಯುಕ್ತ ಮುಚ್ಚಲ್ಪಡುವುದು.

ಕರ್ನಾಟಕ ಸಂಘ

ಮೈಸೂರು ಸೆ. 3 — ಇದೇ ತಾ॥ 5 ರಲ್ಲಿ ಮೈಸೂರು ಅಂತರ ವಿದ್ಯಾಪೀಠದ ಕರ್ನಾಟಕ ಸಂಘದ ಮಹಾ ಚುನಾವಣೆ ಜರುಗಲಿದೆ.

ಆಡಳಿತ ಸ್ವೀಕಾರ

ನವದೆಹಲಿ ಸೆ. 2 — ವೈಸಾರಿಯು ಭವನದಲ್ಲಿ 12 ಮಂತ್ರಿ ಹೊಸ ಮಂತ್ರಿಗಳ ಪೈಕಿ ಪಂ॥ ನೆಹರು ಸೇರಿ 6 ಮಂದಿ ಪ್ರಮಾಣ ಆಡಳಿತ ಮಾಡಿ ವಹಿಸಿಕೊಂಡರು.

ಶ್ವೇತ ಸ್ತ್ರೀ ಸತ್ಯಾಗ್ರಹಿ

ಡರ್ಬಾರ್ ಸೆ. 1 — ಈ ದಿನದ ಸತ್ಯಾಗ್ರಹ ಸಂಬಂಧದಲ್ಲಿ 12 ಮಂದಿ ಸ್ತ್ರೀಯರು, ದಸ್ತಗಿರಿಯಾದರು. ಈ ಪೈಕಿ ಒಬ್ಬಳು ಶ್ವೇತ ಸ್ತ್ರೀ ಮಿಸ್ ವೇರಿ ಬಾರಂ.

ವಿದೇಶದಲ್ಲಿ ರಷ್ಯ ಸೇನೆ

ನ್ಯೂಯಾರ್ಕ್ ಸೆ. 1 — ನ್ಯೂಯಾರ್ಕ್ ಟೈಮ್ಸ್‌ನ ವಾಷಿಂಗ್ ಟನ್ ಬಾತ್ಮಿದಾರನ ಅಧಿಕಾರಯುತ ಬಾತ್ಮಿಯಂತೆ, ರಷ್ಯಾದ ಹೊರಗೆ 2 ಮಿಲಿಯ ರಷ್ಯಾ ಸೈನಿಕರಿಹರೆಂದು ಹೇಳಲಾಗಿದೆ.

ಸರಿಪಡಿಸಲು ಧೀರ್ಘಕಾಲ

ಪ್ಯಾರಿಸ್ ಸೆ. 1 — ಫ್ರಾನ್ಸಿನಲ್ಲಿ ಯುದ್ಧದಿಂದಹಾಳಾದ 2 ಮಿಲಿಯ ಮನೆಗಳನ್ನು ಪುನ ನಿರ್ಮಿಸಲು ಮತ್ತು ಯುದ್ಧದಿಂದ ನಷ್ಟಗೊಂಡ ಫ್ರಾನ್ಸಿನ ಪಟ್ಟಣಗಳನ್ನೆಲ್ಲಾ ಪರಿಪಡಿಸಲು 2000 ನೇ ಇಸವಿಗೆ ಮುಂಚೆ ಸಾಧ್ಯವಿಲ್ಲವೆಂದು ನಿಪುಣರ ಅಭಿಪ್ರಾಯ.

ಲೀಗು ಕಾರ್ಯಚರಣೆ

ಲಾಹೋರು ಸೆ. 1 — ಲೀಗಿನವರ ಸೇರ ಕಾರ್ಯಾಚರಣೆಯಲ್ಲಿ ನೆಹರೂ ಸರಕಾರವನ್ನು ಅಡ್ಡ ಪಡಿಸಿ ನಾಶಪಡಿಸುವುದೆಂದೂ ಅದಕ್ಕಾಗಿ ತಮ್ಮ ಹೆಚ್ಚು ಆಹಾರ ಶತ್ರುಗಳಿಗೆ ಸೇರಿದಂತೆ ಮಾಡುವುದೂ ಕರ ನಿರಾಕರಣೆಯು ಹಿಂದೂ ಬ್ರಿಟಿಷರ ಮೇಲೆ ರಾಜಕೀಯ ಮುತ್ತು ಸಾಂಘಿಕ ಬಹಿಷ್ಕಾರ ಸೆಕ್ಷ್ 144 ಪ್ರತಿಭಟನೆ ಸರಕಾರಿ ಸಂಸ್ಥೆ ಮತ್ತು ಕಾರ್ಯದಲ್ಲಿ ಅಸಹಕಾರ ಮಾಡಲು ರಾಜ ಗುಜನಸ್ ಫಾರರು ಹೇಳಿದ್ದಾರೆ.

೨ ಲಕ್ಷ ರಷ್ಯನರ ಸ್ಮಶಾನ

ಡ್ರೆಸ್‌ಡೆ ಸೆ 1— ರಷ್ಯಾಕ್ಕೆ ಸೇರಿದ ಭಾಗದಲ್ಲಿ 2 ಲಕ್ಷ ಮುಂದಿ ರಷ್ಯಕೈದಿಗಳು ಮತ್ತು ಗಾಯಗೊಂಡ ಜನರನ್ನು ಕೊಂದು ಹೊಲಗದ್ದೆಗಳಲ್ಲಿ ರಾಶಿ ರಾಶಿಯಾಗಿ ಹೂತು ಮೇಲೆ ಆಲೂಗೆಡ್ಡೆ ಮುಂತ್ರಾದುವನ್ನು ಬೆಳೆಯುತ್ತಿದ್ದುದು ಪತ್ತೆಯಾಗಿದೆ.

ಅರಮನೆ ಪುನರ್ರಚಿಸಲು 1 ಕೋಟಿ 50 ಲಕ್ಷ ಪೌಂಡು ವೆಚ್ಚ

ಹಂಳಿನ ಅರಮನೆ ಎಂಬುದು ಲಂಡನ್ನಿನಲ್ಲಿ ಸಂಪ್ರಸಿದ್ಧವಾದುದು ಪುಟ್‌ಬಾಲ್ ಸಂಘ ವೊಂದಕ್ಕೆ ಮತ್ತು ಎರಡು ವಾಹನ ರಸ್ತೆಗೆ ಈ ಹೆಸರು ಅನ್ವಯಿಸುತ್ತದೆ. ಇದನ್ನು ಈಗ ಪುನರ್ನಿರ್ಮಾಣ ಮಾಡಲಿರುವರು. ಖರ್ಚು ಕೇವಲ 1500000 ಪೌಂಡುಗಳು.

ಬಾನುಲಿಯಲ್ಲಿ ಶ್ವಾನ ಭಾಷಣ

ಬ್ರಿಟನ್ನಿನಲ್ಲಿ ಒಂದು ಶ್ವಾನವಿದೆ. ಜೆಕ್ ಎಂಬುದಾಗಿ ಅದರ ಹೆಸರು. ಅದು ಮಾತನಾಡಬಲ್ಲದು! ಅಮೇರಿಕಾವನ್ನು ಕುರಿತು ಬಾನುಲಿಯಲ್ಲಿ ಭಾಷಣ ಮಾಡುವುದು!!

ಜರೂಸೆಲಂ ಆ. 29 — ಪ್ಯಾಲಿಸ್ಟೈನು ಮಾತುಕತೆಗೆ ಬ್ರಿಟನ್ನು ಮುಫ್ತಿಯನ್ನು ಸ್ವಾಗತಿಸುವುದಿಲ್ಲ.

ಪುನಃ ಯುದ್ಧ ಸನ್ನಾಹ

ರಷ್ಯವು ತನ್ನ ಅಧೀನದಲ್ಲಿರುವ ಜರ್ಮನಿಯ ಪ್ರಾಂತ್ಯಗಳಲ್ಲಿ ಜರ್ಮನ್ ರಸಾಯನ ಶಾಸ್ತ್ರಜ್ಞರಿಂದ 'ಎ' ರಾಕೆಟ್ ಬಾಂಬುಗಳನ್ನು ಹೆಚ್ಚು ಪ್ರಮಾಣದಲ್ಲಿ ಉತ್ಪನ್ನ ಮಾಡತ್ತಿರುವುದಂತೆ. ಈ ರಾಕಟ್ಟು ಬಾಂಬುಗಳ ಪ್ರಯೋಗ ಸಂದರ್ಭದಲ್ಲಿ ಸ್ವೀಡಿಷ್ ದೇಶದೊಳಕ್ಕೆ ಬ್ರಿಟಿಷ್ ಸಯಿಂಟಿಸ್ಟರು ಹೋಗಿ, ತಾವಡರುಗಳ ಸಹಾಯದಿಂದ ಅವು ಯಾವ ದೆಶೆಯಿಂದ ಪ್ರಯೋಗಿಸಲ್ಪಡುತ್ತಲಿವೆಯೋ ತಿಳಿದುಕೊಳ್ಳುತ್ತಲಿರುವರಂತೆ. ಬ್ರಿಟಿಷರು ತಮ್ಮ ಅಧೀನದಲ್ಲಿರುವ ಜರ್ಮನ್ ಪ್ರಾಂತ್ಯಗಳಲ್ಲಿ ಜರ್ಮನ್ ಸೈಂಟಿಸ್ಟರ ಸಹಾಯದಿಂದ ರಾಕೆಟ್ಟು ಬಾಂಬುಗಳನ್ನು ತಯಾರಿಸುತ್ತಿರುವರೆಂದು ರಷ್ಯನ್ನರು ತಿಳಿಸುತ್ತಿರುವರು. — ಈ ಪರಿಸ್ಥಿತಿಗಳನ್ನೆಲ್ಲಾ ನೋಡಿದಲ್ಲಿ ಪುನಃ ಪ್ರಪಂಚ ಯುದ್ಧವು ಅತಿ ಸಮೀಪದಲ್ಲಿರುವುದೆಂದು ಅನುಮಾನಪಡಲು ಅವಕಾಶವಾಗಿದೆ.

At Ranjit

From 29–8–46

Anmol Ghadi

ನೂರ್‌ಜಹಾನ್ — ಸುರೇಂದ್ರ

ಜಹರ್ ರಾಜಾ — ಸುರಿಯ

ಪಾತ್ರವಹಿಸಿರುವ

ಅನ್ಮೋಲ್ ಘಡಿ

(ಅಮೂಲ್ಯ ಗಡಿಯಾರ)

ಜಳಿ ಜ್ವರಕ್ಕೆ

ಉಚಿತವಾಗಿ ಔಷಧವನ್ನು

ಕೊಡಲಾಗುವುದು.

ಆಶೋಕಾ ಫಾರ್ಮಸಿ

ಲ್ಯಾನ್ಸ್‌ಡೌನ್ ಬಜಾರ್, ಮೈಸೂರ

Get Medical Diplomas

At home : — Ayurvedic Homeopathic, Unani, etc Prospectus Free.

Old Indian Medical College Kotgarh, Simla

At Opera — From 28–8–46

BISVI SADI

* ನಾರ್ಗಿಸ್ * ಮೋತಿಲಾಲ್ * ನೂರ್‌ಜಹಾನ್ ನಟಿಸಿರುವ

ಬೀಸ್ವಿ ನದಿ

(ಹಿಂದಿ) ಪ್ರತಿದಿನ 3 ಆಟಗಳು

Sri Krishnarajendra Mills Ltd., Mysore

WANTED

Applications are invited from graduates (1) in Chemistry (2) in Mechanical Engineering, for training as Officer Apprentices in the Mills. Graduates in Chemistry should have obtained an Honours degree of the Mysore University or Industrial Chem stry of Benarese University.

The applicants should not be more than 27 years of age and should possess the requisite physical fitness.

The apprenticeship will cover a period of two years. A stipend of Rs. 80/- per mensem plus deamess allowance as per Company's Rules will be paid during the period of apprenticeship.

The sefected candidate should execute a written agreement that he will serve the Company for a period of at least 5 years after training.

Applications should be addressed to—

The General Manager, Sri Krishnarajendra Mills Ltd.

Sri Krishnarajendra Mills P. O., Mysore

and should reach not later than the 15 th September 1946-

N. B.— Canvassing in any form will be a serious disqualification.

Edited, Printed and Published by M. S. Krishna Rao at the Satyavadi Press, Chamaraja Agrahar, Mysore,

ನಮ್ಮ ಆರೋಗ್ಯ ಆನಂದದಾಯಕ

ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಒಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನೆ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವರತೆ ಘನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಫಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಪಿ. ಮಪಣಾಸು.